ದೂಳು ತುಂಬಿತ್ತು. ಅದರೊಳಗೆ ವಜ್ರಗಳು ಇವೆಯೇ? ಅದನ್ನು ತಿಳಿಯಲು ಕೀಯೇ ಇರಲಿಲ್ಲವಲ್ಲ! ಕರಮಚಂದ ಜೇಬಿನಿಂದ ಚಿಕ್ಕ ಪ್ಲಾಸ್ಟಿಕ್ ಲಕೋಟೆ ತೆಗೆದು, ಅದರೊಳಗಿದ್ದ ಬ್ರಷ್‌ನಿಂದ ತಿಜೋರಿಯ ಮೇಲ್ಮೈಯನ್ನು ಶುಚಿಗೊಳಿಸಿದ. ನಂತರ ಭೂತಗನ್ನಡಿ ತೆಗೆದು, ಕೂಲಂಕಷವಾಗಿ ತಪಾಸಣೆ ಮಾಡಿದ.

ನಂತರ ಕುಳಿತ ಭಂಗಿಯಲ್ಲೇ ಒಮ್ಮೆ ಸುತ್ತಲೂ ದಿಟ್ಟಿ ಹರಿಸಿದ. ಪೂರ್ವ ಭಾಗದಲ್ಲಿ ಮತ್ತು ಉತ್ತರ ಭಾಗದಲ್ಲಿ ವಿಶಾಲವಾದ ಕಿಟಕಿಗಳಿದ್ದವು. ಆದರೆ, ಪೆಟ್ಟಿಗೆಯು ಕಿಟಕಿಯಿಂದ ಸಾಕಷ್ಟು ದೂರದಲ್ಲಿತ್ತು. ಆಮೇಲೆ ಜಾಗರೂಕತೆಯಿಂದ ಹಾಸನ್ನು ಸ್ವಸ್ಥಾನಕ್ಕೆ ಸೇರಿಸಿ, ಪಟ್ಟಿಗೆಯನ್ನು ಅದರ ಮೇಲಿರಿಸಿದ.

"ಬೋಪಯ್ಯ, ನೀವು ಕೀಲಿ ಕೈ ಇರಿಸಿದ್ದ ಜಾಗ ತೋರಿಸಿ."

ಬೋಪಯ್ಯ ಹಳೆಯ ಕಪಾಟನ್ನು ತೋರಿದ. ಮೂರನೆಯ ಅರೆಯಲ್ಲಿ, ಅಲಮಾರಿನ ಹಿಂಭಾಗದ ಮುಚ್ಚಿಗೆಯಲ್ಲಿ ಸಣ್ಣ ಪೊಟರೆಯಂತಹ ರಚನೆಯಿತ್ತು. ಅದು ಪಕ್ಕನೆ ಗೋಚರವಾಗುವಂತಿರಲಿಲ್ಲ. ಅದು ಸುಮಾರು ಆರು ಅಂಗುಲ ಉದ್ದವಿತ್ತು. ಪ್ರಾಯಶಃ ಕೀಲಿ ಕೈಯೂ ಅಷ್ಟೇ ಉದ್ದವಿದ್ದಿರಬಹುದು.

ಬೋಪಯ್ಯನ ಕೋಣೆಯೊಳಗೆ ಬೇರೇನೂ ಗಮನ ಸೆಳೆಯುವ ವಸ್ತುಗಳು ಕಣ್ಣಿಗೆ ಬೀಳಲಿಲ್ಲ. ಕರಮಚಂದ ಉತ್ತರದ ಕಿಟಕಿಯ ಬಳಿ ನಿಂತು, ಹೊರಗಡೆ ನಜರು ಹರಿಸಿದ. ಅಲ್ಲೂ ನಿರಾಶೆಗೊಂಡವನಂತೆ ಮುಖ ಕಿವಿಚಿ, ಪೂರ್ವ ಕಿಡಕಿಯತ್ತ ಹೆಜ್ಜೆ ಹಾಕಿದವನು,

"ಹೇ... ಅದ್ಯಾರು?"

ಎಂಬ ಉದ್ಗಾರ ತೆಗೆದು, ಏಕಾಏಕಿ ಹೊರಗಡೆ ಧಾವಿಸಿ, ಯಾರನ್ನೋ ಎಳೆದುಕೊಂಡು ಒಳಬಂದ!

"ಪೊನ್ನು! ಇವ್ನನ್ನು ಯಾಕೆ ಎಳೆದು ತಂದಿರಿ?"

"ಇವ್ನು ಬಾಗಿಲ ಸನಿಹದಲ್ಲಿ ನಿಂತು, ನಮ್ಮ ಮಾತು ಕೇಳಿಸಿಕೊಳ್ಳುತ್ತಿದ್ದ. ಬಾಗಿಲ ಅಡಿಯಲ್ಲಿ ನನಗೆ ನೆರಳು ಕಾಣಿಸಿತು!" ಕರಮಚಂದ ವಿವರಣೆ ನೀಡಿದ.

"ನಾನು... ಕಾಫಿ ಮಾಡ್ಲಾ ಅಂತ ಕೇಳೋಕೆ ಬಂದಿದ್ದೆ... ನಂದು ತಪ್ಪಿಲ್ಲ, ಯಜಮಾನ್ರೇ" ಬಡಬಡಿಸಿದ ಮುದುಕ.

"ಮತ್ತೇಕೆ ಬಾಗಿಲ ಬಳಿಯಲ್ಲೇ ನಿಂತಿದ್ದೆ?" ಬೋಪಯ್ಯ ವಿಚಾರಿಸಿದ.

"ನೀವೇನೋ ಜೋರಾಗಿ ಚರ್ಚೆ ಮಾಡ್ತಾ ಇದ್ರೀ. ಒಳಗೆ ಬರೋಕೆ ಹೆದ್ರಿಕೆಯಾಯ್ತು!" ಮುದುಕ ಕಂಪಿಸುತ್ತಿದ್ದ.

"ಓ.ಕೆ... ಪೊನ್ನು! ಬಿಸಿಯಾದ ಕಾಫಿ ಕೊಡು ನೋಡೋಣ" ಕರಮಚಂದ ಸಮಾಧಾನಿಸಿದ.

ಆತ ತಲೆಯಾಡಿಸಿ ಹೊರಟು ಹೋದ. ನಂತರ ಪೂರ್ವದ ಕಿಟಕಿಯ ಬಳಿ ನಿಂತ ಕರಮಚಂದ ಹೊರಗಡೆ ಇಣುಕಿದವನು ಏಕಾಏಕಿ ಪ್ರಶ್ನೆ ಎಸೆದ,

"ಬೋಪಯ್ಯ, ನೀವು ಕೊನೆಯ ಬಾರಿಗೆ ತಿಜೋರಿ ತೆರೆದದ್ದು ಯಾವತ್ತು?"

"ಮೊನ್ನೆ ರಾತ್ರಿ. ಸುಮಾರು ಹನ್ನೊಂದೂವರೆಗೆ ಇರಬಹುದು. ಮೂತ್ರಶಂಕೆಗೆಂದು ಎದ್ದವನು ತಿಜೋರಿ ತೆರೆದಿದ್ದೆ."

"ನೀವು ಆಗಾಗ್ಗೆ ಯಾಕೆ ವಜ್ರಗಳನ್ನು ನೋಡುವುದು?" ನನ್ನ ಕುತೂಹಲದ ಪ್ರಶ್ನೆ.

"ಅವು ಇವೆಯೇ ಅಂತ ಖಚಿತಪಡಿಸಿಕೊಳ್ಳುವುದು. ಇನ್ನೊಂದು, ಅದನ್ನು ನೋಡುವಾಗ ಖುಷಿಯಾಗುತ್ತದೆ!"

"ಅವುಗಳನ್ನು ಲಾಕರಿನಲ್ಲಿ ಇಡಬಹುದಲ್ಲವೇ?'

"ತಿಜೋರಿಯು ಲಾಕರಿಗಿಂತ ಸುರಕ್ಷಿತ. ಆಗಾಗ್ಗೆ ವಜ್ರಗಳನ್ನು ಕಣ್ತುಂಬಿಕೊಳ್ಳಲು ತಿಜೋರಿಯೇ ಒಳ್ಳೆಯದು."